## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ: 25-2-2013 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | | ಹಾಜರಿದ್ದ ಅಧಿಕಾರಿಗಳು |
|---|---|---|
| ಮಾಲತಿ ಎನ್.ವೆಂಕಟಸ್ವಾಮಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಕೆ. ರಮೇಶ್‌ರಾಜು | ಸದಸ್ಯರು | ಕಾರ್ಯಪಾಲಕ ಅಭಿಯಂತರರು(ಮಾರುಕಟ್ಟೆ) |
| ಹೆಚ್.ಎಸ್.ಲಲಿತ | ಸದಸ್ಯರು | ಕಂದಾಯಾಧಿಕಾರಿ(ಮಾರುಕಟ್ಟೆ) |
| ಎ. ಕೋದಂಡರೆಡ್ಡಿ | ಸದಸ್ಯರು | ಸಹಾಯಕ ಕಂದಾಯಾಧಿಕಾರಿ(ಪೂರ್ವ-ಮಾರುಕಟ್ಟೆ) |
| ಹೆಚ್.ಎಸ್.ರಾಜೇಶ್ವರಿ | ಸದಸ್ಯರು | ಸಹಾಯಕ ಕಂದಾಯಾಧಿಕಾರಿ(ಪಶ್ಚಿಮ-ಮಾರುಕಟ್ಟೆ) |
| ಪಿ. ಸುಗುಮಾರ್ (ಸುಗುಣ್) | ಸದಸ್ಯರು | |
| ಜಿ.ಎ. ಅಶ್ವತ್ಥ್ ನಾರಾಯಣ | ಸದಸ್ಯರು | |
| ವಿ. ಪಳನಿಯಮ್ಮಾಳ್ | ಸದಸ್ಯರು | |
| ಟಿ. ಗೋಪಾಲಕೃಷ್ಣ | ಸದಸ್ಯರು | |
| ಶಕೀಲ್ ಅಹಮದ್ | ಸದಸ್ಯರು | |
| ಗೈರು ಹಾಜರಿದ್ದ ಸದಸ್ಯರು | | |
| ಕೆ. ಶಿವಕುಮಾರ್ | ಸದಸ್ಯರು | |

*(ಹಿಂದಿನ ಸಭೆಯ ನಡವಳಿಯನ್ನು ಓದಿ ದಾಖಲಿಸಿಕೊಳ್ಳಲಾಯಿತು)*

*ವಿಷಯದ ಸಂಖ್ಯೆ: ಮಾ.ಸ್ಥಾ.ಸ/ಪಿ.ಆರ್/3/2012-2013*

ಮಾನ್ಯ ಆಯುಕ್ತರವರ ದಿನಾಂಕ: 04-02-2013 ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀ.ಶ್ರೀನಿವಾಸ್, ಬಿನ್ ಲೇ॥ ಮುನಿಯಪ್ಪ, ರವರಿಗೆ ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆಯಲ್ಲಿನ ಮಳಿಗೆ ಸಂಖ್ಯೆ:20ನ್ನು ಹಂಚಿಕೆ ಮಾಡುವ ಕುರಿತು ಟಿಪ್ಪಣಿಯನ್ನು ಮಂಡಿಸುವಂತೆ ಮಾರುಕಟ್ಟೆ ಸ್ಥಾಯಿ ಸಮಿತಿ ಅಧ್ಯಕ್ಷರು ದಿ:01-01-2013ರಂದು ಪತ್ರ ಮುಖೇನ ಕೋರಿರುತ್ತಾರೆ.

ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆಯ ನೆಲ ಮಹಡಿಯಲ್ಲಿರುವ ಮಳಿಗೆ ಸಂಖ್ಯೆ:20 ಈ ಮೊದಲು ಶ್ರೀ.ಸುಬ್ರಮಣಿ ಎಂಬುವವರಿಗೆ ಹಂಚಿಕೆಯಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ದಾವೆ ಸಂಖ್ಯೆ: WP.No.1421/2012(LB-BMP) ರಲ್ಲಿ ದಿ:03-02-2012ರಂದು ಜಾರಿ ಮಾಡಿರುವ ಆದೇಶದ ಮೇರೆಗೆ ಮಾನ್ಯ ಆಯುಕ್ತರವರ ಅನುಮೋದನೆ ಪಡೆದು ಶ್ರೀ.ಸುಬ್ರಮಣಿ, ರವರಿಗೆ ಮಳಿಗೆ ಸಂಖ್ಯೆ:20ರ ಬದಲಾಗಿ ಅಪ್ಪರ್‌ಬೇಸ್‌ಮೆಂಟ್‌ನಲ್ಲಿರುವ ಮಳಿಗೆ ಸಂಖ್ಯೆ:22ನ್ನು ದಿ:07-08-2012 ರಂದು ಬದಲಿ ಹಂಚಿಕೆ ಮಾಡಲಾಗಿದ್ದು, ಮಳಿಗೆ ಸಂಖ್ಯೆ:20, ಹಾಲಿ ಪಾಲಿಕೆ ವಶದಲ್ಲಿ ಇರುತ್ತದೆ.

ಪಾರದರ್ಶಕ ಕಾಯ್ದೆ ಅನ್ವಯ ಯಾವುದೇ ಪಾಲಿಕೆ ಮಳಿಗೆಗಳನ್ನು ಹಂಚಿಕೆ ಮಾಡಬೇಕಾದ್ದಲ್ಲಿ ಟೆಂಡರ್-ಕಂ-ಹರಾಜಿನ ಮೂಲಕವೇ ಹಂಚಿಕೆ ಮಾಡಬೇಕಾಗಿರುತ್ತದೆ, ಈ ತಹಲ್‌ವರೆವಿಗೂ ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ಮಳಿಗೆ ಸಂಖ್ಯೆ:20ನ್ನು ಯಾರಿಗೂ ಹಂಚಿಕೆ ಮಾಡಿರುವುದಿಲ್ಲ.

ಮುಂದುವರಿದಂತೆ, ಕೆ.ಎಂ.ಸಿ. ಕಾಯ್ದೆ 1976ರ ನಿಯಮಾವಳಿ 176 ರಲ್ಲಿ ಪಾಲಿಕೆಯ ಮಳಿಗೆಗಳನ್ನು ನೇರವಾಗಿ ಗುತ್ತಿಗೆ/ಪರಬಾರೆ ಮಾಡುವ ಅಧಿಕಾರವನ್ನು ಈ ಕೆಳಕಂಡಂತೆ ಪ್ರತ್ಯಾಯೋಜನೆ ಮಾಡಲಾಗಿದೆ.

4) ಎರಡು ವರ್ಷಗಳ ಅವಧಿಗೆ ಮೀರದಂತೆ ಪಾಲಿಕೆ ಆಯುಕ್ತರವರಿಗೆ
5) ಮೂರು ವರ್ಷಗಳ ಅವಧಿಗೆ ಮೀರದಂತೆ ಸಂಬಂಧಪಟ್ಟ ಸ್ಥಾಯಿ ಸಮಿತಿಗೆ
6) ಐದು ವರ್ಷಗಳಿಗೆ ಮೀರಿದ ಅವಧಿಗೆ ಪಾಲಿಕೆಯ ಸಭೆಯ ನಿರ್ಣಯದ ನಂತರ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಒಳಗೊಂಡ ಟಿಪ್ಪಣಿಯನ್ನು ಮಾರುಕಟ್ಟೆ ಸ್ಥಾಯಿ ಸಮಿತಿಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾಗಿರುವ ದಿನಾಂಕ:04-02-2013ರ ಆಯುಕ್ತರ ಟಿಪ್ಪಣಿ.

*ನಿರ್ಣಯ:- ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 176ರಲ್ಲಿ ಮಾರುಕಟ್ಟೆ ಸ್ಥಾಯಿ ಸಮಿತಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ,ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ ನೆಲ ಮಹಡಿಯಲ್ಲಿರುವ ಮಳಿಗೆ ಸಂಖ್ಯೆ:20ನ್ನು ಅರ್ಜಿದಾರರಾದ ಶ್ರೀ.ಶ್ರೀನಿವಾಸ್ ಬಿನ್ ಲೇಟ್ ಮುನಿಯಪ್ಪ. ರವರಿಗೆ 3 ವರ್ಷಗಳ ಅವಧಿಗೆ ಹಾಲಿ ನಿರ್ಧರಿಸಲಾಗಿರುವ ಮಾಸಿಕ ಪರವಾನಗಿ ಶುಲ್ಕ ರೂ.582ಕ್ಕೆ ಪಾಲಿಕೆ ಆದಾಯದ ಹಿತದೃಷ್ಟಿಯಿಂದ 25 ಪ್ರತಿಶತ ಹೆಚ್ಚುವರಿ ಮಾಡಿ, ಮಾಸಿಕ ಪರವಾನಗಿ ಶುಲ್ಕ ರೂ.728/-ಕ್ಕೆ ನಿಗಧಿಪಡಿಸಿ, ಹಂಚಿಕೆ ಮಾಡಲು ತೀರ್ಮಾನಿಸಲಾಯಿತು. ಉಳಿದಂತೆ ಪಾಲಿಕೆ ಮಾರುಕಟ್ಟೆಗಳಲ್ಲಿ ಹಾಲಿ ಖಾಲಿ ಇರುವ ಮಳಿಗೆಗಳನ್ನು ನಿಯಮಾವಳಿಗಳ ಮೇರೆಗೆ ಹಂಚಿಕೆ ಮಾಡಲು ತುರ್ತಾಗಿ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ಮಾನ್ಯ ಆಯುಕ್ತರವರನ್ನು ಕೋರಲು ತೀರ್ಮಾನಿಸಿ, ದಿನಾಂಕ: 04-02-2013ರ ಆಯುಕ್ತರವರ ಟಿಪ್ಪಣಿಯನ್ನು ಅನುಮೋದಿಸಿದೆ.*

Malathi N Venkataswamy

(ಮಾಲತಿ.ಎನ್.ವೆಂಕಟಸ್ವಾಮಿ)
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ.

ಪ್ರತಿಯನ್ನು :-

1) ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಯುಕ್ತರವರ ಆಪ್ತಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
4) ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಕಳುಹಿಸಿದೆ.
5) ಅಪರ ಆಯುಕ್ತರು(ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
6) ಕೌನ್ಸಿಲ್ ಕಾಯದರ್ಶಿಯವರ ಅವಗಾಹನೆಗೆ ಕಳುಹಿಸಲಾಗಿದೆ.
7) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸೂಕ್ತ ಕ್ರಮ ವಹಿಸಲು ಕೋರಿ ಕಳುಹಿಸಿದೆ.
8) ಮುಖ್ಯ ಅಭಿಯಂತರರು (ಮಾರುಕಟ್ಟೆ) ರವರಿಗೆ ಕಳುಹಿಸಿದೆ.
9) ಕಾರ್ಯಪಾಲಕ ಅಭಿಯಂತರರು(ಮಾರುಕಟ್ಟೆ) ರವರಿಗೆ ಕಳುಹಿಸಿದೆ.
10) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಸೂಕ್ತ ಕ್ರಮ ವಹಿಸಲು ಕೋರಿ ಕಳುಹಿಸಿದೆ.
11) ಸಹಾಯಕ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಸೂಕ್ತ ಕ್ರಮ ವಹಿಸಲು ಕೋರಿ ಕಳುಹಿಸಿದೆ
12) ಮಾರುಕಟ್ಟೆ ಸ್ಥಾಯಿ ಸಮಿತಿಯ ಮಾನ್ಯ ಸದಸ್ಯರುಗಳಾದ ಶ್ರೀಯುತರು :

| | |
|---|---|
| ಕೆ.ರಮೇಶ್‌ರಾಜು (ವಾರ್ಡ್ ನಂ.184) | ಪಿ. ಸುಗುಮಾರ್(ಸುಗುಣ್)(ವಾರ್ಡ್ ನಂ.51), |
| ಹೆಚ್.ಎಸ್.ಲಲಿತ(ವಾರ್ಡ್ ನಂ.162), | ಜಿ.ಎ. ಅಶ್ವತ್ಥ್‌ನಾರಾಯಣ(ವಾರ್ಡ್ ನಂ.139), |
| ಎ. ಕೋದಂಡರೆಡ್ಡಿ(ವಾರ್ಡ್ ನಂ.27), | ವಿ. ಪಳನಿಯಮ್ಮಾಳ್(ವಾರ್ಡ್ ನಂ.60), |
| ಹೆಚ್.ಎಸ್. ರಾಜೇಶ್ವರಿ(ವಾರ್ಡ್ ನಂ. 131), | ಶಕೀಲ್ ಅಹಮ್ಮದ್ (ವಾರ್ಡ್‌ನಂ.91) |
| ಟಿ. ಗೋಪಾಲಕೃಷ್ಣ (ವಾರ್ಡ್ ನಂ.94) | ಕೆ. ಶಿವಕುಮಾರ್(ವಾರ್ಡ್ ನಂ.111), |

ರವರುಗಳ ಅವಗಾಹನೆಗೆ ಕಳುಹಿಸಲಾಗಿದೆ.